Regd No B. 155 25-11-1969

SATYAVADI Daily, MYSORE 4 ★ 53 rd Year of Publication

శ్రీ సత్యనారాయణ
బినిఫిట్ స్కీం
(చాముండేశ్వరి టాకీస్ కట్టడ)
203, సయ్యాజిరావ్ రస్తే,
మైసూరు-1
మేల్కండ యోజనేగే
ఇందే చందాదారరాగిరి
అదర ఫలవన్ను పడెయిరి

సత్యవಾದಿ

Golden Jubilee Celebrated Paper

స್ಥಾಪಕರು: ಅರಮನೆ ಏರಸ್ತೆದಾರ್ ಎಂ. ವಿ. ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಸಂತ ಫಾತೇಸಿಂಗ್‌ರವರ ಪ್ರಾಣಾರ್ಪಣೆಯ ನಿರ್ಧಾರ

ಅಪೊಲೋ 12

ಹೌಸ್ಟನ್— ಚಂದ್ರನಲ್ಲಿಗೆ ಹೋಗಿದ್ದ ಅಪೊಲೊ 12 ಸರಕ್ಷಿತವಾಗಿ ವಾಪಸ್ಸು ಬಂದು ಪೆಸಿಫಿಕ್ ಸಾಗರದಲ್ಲಿ ಇಳಿಯಿತು.

●

ಪೋಲೀಸರ ಪ್ರಶಂಸೆ

ಬೆಂಗಳೂರು— ತಾವು ತುಮಕೂರು ಬಸ್‌ಸ್ಟ್ಯಾಂಡಿನಲ್ಲಿ ಕೆಲ ತಿಂಗಳ ಹಿಂದೆ ತಾವು ಕಳೆದುಕೊಂಡಿದ್ದ ರೂ 236000 ಮೌಲ್ಯದ ಚಿನ್ನಾಭರಣ ಮತ್ತು ಹಣವಿದ್ದ ಸೂಟ್‌ಕೇಸನ್ನು ಪೋಲೀಸರು ಸಿಐಡಿ ಯವರ ಸಹಾಯದಿಂದ ಪತ್ತೆಮಾಡಿ ಪೂರ್ತಾ ಅಸ್ತಿಯೊಡನೆ ತಂದುಕೊಟ್ಟದ್ದಕ್ಕೆ ಕಾರವಾರ ಜಿಲ್ಲೆಯ ಶ್ರೀ ಅಸನೇಕರೆಯವರು ಪೋಲೀಸರ ಕಾರ್ಯವನ್ನು ಸ್ತುತಿಸಿ ಈ ಪತ್ತೇಕಾರ್ಯ ನಡೆಸಿದವರಿಗೆ ರೂ. 1500 ಪಾರಿತೋಷಕ ಕೊಡುವುದಾಗಿ ಪೋಲೀಸು ಮುಖ್ಯಾಧಿಕಾರಿಯವರಿಗೆ ತಿಳಿಸಿರುವರೆಂದೂ, ಅವರು ಸರಕಾರಕ್ಕೆ ತಿಳಿಸಿರುವರೆಂದೂ ವರದಿಯಾಗಿದೆ.

★

ಅಪಾರ ಎಣ್ಣೆ ನಷ್ಟ

ಕೋಲಾರ— ಬೆಂಗಳೂರಿಗೆ ಹೋಗುತ್ತಿದ್ದ ಎಣ್ಣೆ ತುಂಬಿದ ಟ್ಯಾಂಕರು ತಮಕಗ್ಗಾನುವ ಹತ್ತಿರ ಒಡೆದು 10000 ಲಿಟರು ಎಣ್ಣೆ ನಷ್ಟವಾಯಿತು.

★

ಅರ್ಚಕರ ಅನ್ನಸತ್ಯಾಗ್ರಹ

ಮದರಾಸು— ತಮ್ಮ ಇತರ ಕೇಳಿಕೆಗಳ ಜೊತೆಗೆ ದೇವಾಲಯದ ಆಸ್ತಿಯನ್ನು ಸರಕಾರ ವಹಿಸಿಕೊಳ್ಳಬೇಕೆಂದು ತಮಿಳುನಾಡುವಿನ 71 ಮಂದಿ ಅರ್ಚಕರು ಮತ್ತು ಇತರ ದೇವಾಲಯ ನೌಕರರು ಮುಜರಾಯಿ ಇಲಾಖಾ ಆಫೀಸಿನ ಮುಂದೆ ಒಂದು ದಿನದ ಸಾಂಕೇತಿಕ ಅನ್ನಸತ್ಯಾಗ್ರಹ ನಡೆದರು.

ಇಂದಿರಾರಿಗೆ ದೇವರ ಪ್ರಸಾದ

ನವದೆಹಲಿ— ಪ್ರಧಾನಿ ಇಂದಿರಾರವರ ಜನ್ಮದಿನವಾದ ನವೆಂಬರ್ 19 ರಂದು, ರಾಮೇಶ್ವರ, ಮಧುರೈ, ಶ್ರೀರಂಗ, ಪಳನಿ, ತಿರುಪತಿ ತಿರುಚುಂಡಾ, ಕನ್ಯಾಕುಮಾರಿ ಸೇರಿ, ದಕ್ಷಿಣ ಭಾರತದ ದೇವಾಲಯಗಳಲ್ಲಿ ಅವರ ಶ್ರೇಯಸ್ಸಿಗಾಗಿ ಪೂಜೆ ನಡೆಸಿ ತಂದ ಪ್ರಸಾದವನ್ನು, ತಮಿಳುನಾಡು ಕಾಂಗ್ರೆಸಿಗರ ಗುಂಪು ಏಐಸಿಸಿ ಚಪ್ರರದಲಿ ಇಂದಿರಾರವರಿಗೆ ಕೊಟ್ಟಿತು.

ಪುರಸಭಾ ಕಛೇರಿ, ಮೈಸೂರು

ದಿನಾಂಕ : 19-11-1969

ನಂ. ಸಿ.ಪಿ.ಆರ್ 94 / 69-70

ಆಬ್‌ಸ್ಟ್ರಕ್ಟ್ ರೀಟೆಂಡರ್

ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ— ಮೈಸೂರು ಸಿಟಿ ಮುನಿಸಿಪಲ್ ಆಡಳಿತಕ್ಕೆ ಒಳಪಟ್ಟ ಹೆಲ್ತ್ ಇಲಾಖೆ ಮತ್ತು ಸೂಯೇಜ್ ಫಾರಂ ಎತ್ತುಗಳಿಗೂ ತಾ : 1-2-70 ರಿಂದ 31-1-1971 ರ ಆಖೈರುವರೆವಿಗೆ ಬೇಕಾಗುವ ಸುಮಾರು 600 ಕ್ವಿಂಟಾಲ್ ಹುರುಳಿಯನ್ನು ನುಚ್ಚು ಮಾಡಲು ಇಷ್ಟವುಳ್ಳವರು ತಾ : 5-12-1969 ನೇ ಶುಕ್ರವಾರ ಮಧ್ಯಾಹ್ನ 4 ಘಂಟೆಯೊಳಗಾಗಿ ತನ್ನು ಅತ್ಯಂತ ಕಡಮೆ ದರವನ್ನು ಕ್ವಿಂಟಾಲ್ ಒಂದಕ್ಕೆ ನಮೂದಿಸಿ ಮುನಿಸಿಪಲ್ ಖಜಾನೆಗೆ 50 ರೂಪಾಯಿ ಠೇವಣಿಯನ್ನು ಪಾವತಿ ಮಾಡಿದ ಚಲನ್ ಲಗತ್ತಿಸಿ ಸೀಲಾದ ಟೆಂಡರನ್ನು ಮುನಿಸಿಪಲ್ ಕಮಿಷನರ್ ರವರಿಗೆ ಕೊಡಬಹುದು ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು, ಮತ್ತು ನೋಟೀಸ್ ಬೋರ್ಡಿನಲ್ಲಿ ಕಾಣಬಹುದು.

(ಸಹಿ) ಪಿ. ಪಿ. ಪ್ರಭು
ಮುನಿಸಿಪಲ್ ಕಮಿಷನರ್

ರಾಜ್ಯ ಸರ್ಕಾರ ಪ್ರಧಾನಿ ಗುಂಪಿಗೆ ಸೇರಲು ವಿನಂತಿ

ಕೋಲಾರ— ಇಲ್ಲಿ ಸಮ್ಮಿಳಿತರಾದ ಕೆಲವು ತಾಲ್ಲೂಕು ಜೋರ್ಡು ಅಧ್ಯಕ್ಷರು ಮತ್ತು ಜಿಲ್ಲಾ ಶಾಸಕರು, ರಾಜ್ಯ ಸರಕಾರವು ಪ್ರಧಾನಿ ನಾಯಕತ್ವದ ಕಾಂಗ್ರೆಸ್ಸು ಗುಂಪಿಗೆ ಸೇರಲು ಮನವಿ ಮಾಡಿದರು.

●

ನೌಕಾಧಿಕಾರಿಗಳ ಹೇಳಿಕೆ

ಅಹಮದಾಬಾದು— ಶಾಂತಿಯುತ ಇಚ್ಛೆ ಹೇಗಿದ್ದರೂ, ಭಾರತವು ನವೀನ ಯುದ್ಧಾಸ್ತ್ರಗಳನ್ನು ಹೊಂದಿರಬೇಕೆಂದು ನೌಕಾ ಮುಖ್ಯಾಧಿಕಾರಿ ಶ್ರೀ ಸೋರ್ಮ ಹೇಳಿದರು.

★

ಕಾಂಗ್ರೆಸ್

ನವದೆಹಲಿ— ಪ್ರಧಾನಿಯವರ ಕಾಂಗ್ರೆಸ್ ಬೊಂಬಾಯಿನಲ್ಲಿ ಅಧ್ಯಕ್ಷರ ಚುನಾವಣೆಗೆ ಮಹಾಸಭೆ ನಡೆಸಲು ಪ್ರಕಟಣೆ ಹೊರಡಿಸಿತು – ಶ್ರೀ ನಿಜಲಿಂಗಪ್ಪ ಮತ್ತು ಅವರ ಗುಂಪಿನವರು ಮಹಾಸಭೆಯನ್ನು ಅಹಮದಾಬಾದಿನಲ್ಲಿ ಡಿಸೆಂಬರು 19 ರಿಂದ 21 ರವರೆಗೆ ನಡೆಸಲು ನಿರ್ಧರಿಸಿದೆ.

●

ಮುಖ್ಯ ಮಂತ್ರಿಗಳ ಅನ್ನಸತ್ಯಾಗ್ರಹ ಪಾರ್ಕಿನಲ್ಲೇ ಆಫೀಸು

ಕಲ್ಕತ್ತಾ— ಸಿಪಿಐ (ಎಂ) ರಿಂದ ರಾಜ್ಯದಲ್ಲಿ ಆಗುತ್ತಿರುವ ನ್ಯಾಯವಿರುದ್ಧ ಕಾರ್ಯಗಳನ್ನು ತಡೆಗಟ್ಟಿ ಚಳವಳವನ್ನು ಬಂಗ್ಲಾ ಕಾಂಗ್ರೆಸಿನವರು ಹೂಡಿ ಸಾಮೂಹಿಕ ಅನ್ನಸತ್ಯಾಗ್ರಹದ ನಾಯಕತ್ವವನ್ನು ಮುಖ್ಯಮಂತ್ರಿ ಶ್ರೀ ಅಜ್ಯಾ ಘೋಷರು ವಹಿಸಿಕೊಂಡು ಡಿಸೆಂಬರು 1 ರಿಂದ 3 ದಿವಸ ಉಪವಾಸ ಆಚರಿಸುವದಾಗಿ ಅವರು ಹೇಳಿದರು – ಸತ್ಯಾಗ್ರಹದ ಸ್ಥಳ ರಾಜಭವನದ ಎದುರಿನ ಕರ್ಜನ್ ಪಾರ್ಕೆಂದೂ, ಪಾರ್ಕಿನಲ್ಲಿ ಮುಖ್ಯಮಂತ್ರಿಗಳ ಆಫೀಸು ಇರುವುದಾಗಿದೆ.

ಪ್ರಾಣಾರ್ಪಣೆ

ಅಮೃತಸರ— ಚಂಡೀಘರವನ್ನು ಸಂಜಾಬಿಗೆ ಸೇರಿಸಬೇಕೆಂಬ ಸಮಸ್ಯೆ ವಿಚಾರದಲ್ಲಿ, ತಾವು ಜನವರಿ 26 ರಿಂದ 6 ದಿನಗಳು ಉಪವಾಸಮಾಡಿ ಫೆಬ್ರವರಿ 1 ರಂದು ಬೆಂಕಿಯಲ್ಲಿ ಬಿದ್ದು ಪ್ರಾಣಾರ್ಪಣೆ ಮಾಡುವುದಾಗಿ ಸಂತ ಫಾತೇ ಸಿಂಗ್ ಹೇಳಿರುವರು.

★

ಕಾಂಗ್ರೆಸ್ ಆಸ್ತಿ ಸಾಲಾ ಹೆಂಚಿಕೆ !

ನವದೆಹಲಿ— ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರವರು, ಕಾಂಗ್ರೆಸ್ ಮಹಾಸಂಸ್ಥೆ ಎರಡು ಭಾಗವಾಗಿರುವದು ಸ್ಪಷ್ಟವಾಗಿದೆಯೆಂದೂ, ಅದರ ಆಸ್ತಿ ಪಾಸ್ತಿ ಮತ್ತು ಸಾಲಸೋಲಗಳ ಬಗ್ಗೆ ನೇರ ಮಾತುಕತೆ ಅಥವಾ ಪಂಚಾಯಿತಿ ಮೂಲಕ ಸೌಹಾರ್ದ್ರದಿಂದ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಹೇಳಿದರು — ಪಾರ್ಟಿ ಧ್ವಜ ಮತ್ತು ಚುನಾವಣಾ ಗುರು ತು ವಿಷಯವಲ್ಲಿ ವಿರುದ್ಧ ಗುಂಪುಗಳಲ್ಲಿ ನಮಗೆ ಪಾರ್ಲಿಮೆಂಟು ಮತ್ತು ಶಾಸನ ಸಭೆಗಳಲ್ಲಿ ಬಹುಮತವಿರುವದರಿಂದು, ವಿರೋಧಿಗಳು ಕುಂದುಕೊರತೆ ಎತ್ತಲಾಗದೆಂದರು.

★

ಗಡಿನಾಡು ಗಾಂಧಿ ಅಸಮಾಧಾನ

ನವದೆಹಲಿ— ಭಾರತದ ವಿಭಾಗದ ನಂತರ ಭಾರತವು ಫಕ್ತೂನಿಗಳ ನೆರವಿಗೆ ಬರದಿರುವ ವಿಷಯದಲ್ಲಿ ಖಾ ಅಬ್ದುಲ್ ಗಫಾರ್ ಖಾನರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಲ್ಲಿ ಆಕ್ಷೇಪಿಸಿದರು – ವಿಭಾಗ ನಂತರ ಅಲ್ಲಿ ಫಕ್ತೂನರಿಗಾಗುತ್ತಿರುವ ಹಿಂಸೆಯನ್ನು ಮಹಾತ್ಮಾ ಗಾಂಧಿಯವರಿಗೆ ತಿಳಿಸಿದಾಗ ಅವರು ಭಾರತ ಸಹಾಯ ಮಾಡುವುದಾಗಿ ತಿಳಿಸಿದ್ದರು ಎಂದೂ ಹೇಳಿದರು.

★

ಆಪಾದನೆ

ಮದರಾಸು— ಸಿಂಡಿಕೇಟ್ ಕಾಂಗ್ರೆಸಿನ ಶ್ರೀಮತಿ ತಾರಕೇಶ್ವರಿ ಸಿನ್ಹರು, ಪ್ರಧಾನಿ ಇಂದಿರಾರವರು ನವೆಂಬರ್ 1 ರಂದು ಮದರಾಸಿಗೆ ಕೆಲವು ಕಾಂಗ್ರೆಸಿಗರನ್ನೂ ತಮಿಳುನಾಡು ಮುಖ್ಯಮಂತ್ರಿಗಳನ್ನೂ ಕಾಣಲು ರಹಸ್ಯವಾಗಿ ವಿಮಾನದಲ್ಲಿ ಬಂದಿದ್ದರೆಂದು ಆಪಾದಿಸಿರುವರು.

ರಾಜ್ಯಪಾಲರ ನುಡಿ

ಕೋಲಾರ— ಹೇಗಾದರೂ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಿದೆ ; ಆಗಿಹೋದ್ದನ್ನು ಚರ್ಚಿಸಿ ಪ್ರಯೋಜನವಿಲ್ಲ ; ಈ ವಿಭಾಗ ಎಷ್ಟರಮಟ್ಟಿಗೆ ಹೆಚ್ಚಾಗಿ ಜನತ್ವ ಹಿತಕ್ಕಾಗಿ ಉಪಯೋಗಿಸಲ್ಪಡಬೇಕೆಂಬುದನ್ನು ನಾವು ಈಗ ನಾವು ಈಗ ಯೋಚಿಸಬೇಕೆಂದು ಮಧ್ಯಪ್ರದೇಶದ ಗವರ್ನರ್ ಶ್ರೀ ಕೆ ಸಿ ರೆಡ್ಡಿಯವರು, ಈಚಿನ ಕಾಂಗ್ರೆಸ್ಸಿನಲ್ಲಾದ ವಿಷಯ ಕುರಿತು ಹೇಳಿದರು.

ಬೆಳಗಾಂನಲ್ಲಿನ ಮರಾಟಿಗರಿಗೆ ಮಹಾರಾಷ್ಟ್ರ ಸರಕಾರದ ನೆರವು

ಬೆಳಗಾಂ— ಬೆಳಗಾಂನಲ್ಲಿ ಜ್ಯೋತಿ ಮಹಾವಿದ್ಯಾಲಯ ನಡೆಸುತ್ತಿರುವ ದಕ್ಷಿಣ ಮಹಾರಾಷ್ಟ್ರ ಶಿಕ್ಷಣ ಮಂಡಲಿಗೆ ಮನ್ನಣೆ ಕೊಟ್ಟು ಬೆಳಗಾಂನಲ್ಲಿ ಅಲ್ಪ ಸಂಖ್ಯಾ ಭಾಷಾ ಸಮಸ್ಯೆ ಪರಿಹರಿಸಬೇಕೆಂದು ಮೈಸೂರು ಸರಕಾರವನ್ನು ಮಹಾರಾಷ್ಟ್ರ ಸರಕಾರ ಪ್ರೇರಿಸುತ್ತಿದೆ ಎಂದು ಮಹಾರಾಷ್ಟ್ರ ಶಾಸನ ಸಭೆಯಲ್ಲಿ ತಿಳಿಸಲಾಯಿತು — ಮೇಡಲಿಯೂ ಕಟ್ಟುವ ಕಟ್ಟಡಕ್ಕೆ ಮಹಾರಾಷ್ಟ್ರ ಸರಕಾರ ರೂ 1 ಲಕ್ಷ ಕೊಟ್ಟಿದೆಯೆಂದೂ ತಿಳಿಸಲಾಯಿತು.

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿವಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದ್ದಾ ತಿಂಗಳಿಗೆ 40 ಪೈಸೆ; ಅಂಚೆಸಮೇತ ವರ್ಷಕ್ಕೆ ರೂ 10-0)
ಸೋಮವಾರ ಸಂಚಿಕೆ ವರ್ಷಕ್ಕೆ ರು. 2

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ಸ್

ಜಯಪ್ರದ 2ನೇ ವಾರ
ಅತ್ಯಾಕರ್ಷಕ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಮ್ ಸಾಯ

ಪಾತ್ರ : ಮಾಲಾಸಿನ್ಹ, ಜಾಯ್ ಮುಖರ್ಜಿ, ತರ್ಕಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯರ್
[ದಿನ 3 ಪ್ರದರ್ಶನಗಳು]

ಅಪೆರಾ— 21-11-69 ರಿಂದ

.... ಅತ್ಯಾಕರ್ಷಕ ತಮಿಳು ಚಿತ್ರ ....

ದೈವಮಗನ್

ಪಾತ್ರ : ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana



ಗೋರಕ್ಷಣೆಗೆ ಮತ್ತು ಪಶುಗಳ ಅಭಿವೃದ್ಧಿಗಾಗಿ ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore